Regd No B G 155 12-1-1970

SATYAVADI Daily, MYSORE 4 ‡ 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಹರಯಾಣಾದಲ್ಲಿ ತಾ. 16 ರಂದು ಹರತಾಳ

ಭೂಕಂದಾಯ

ನವದೆಹಲಿ— ಭೂಕಂದಾಯ ರದ್ದಿಯಾತಿಯು ಆರ್ಥಿಕಕ್ಕಿಂತಲೂ ರಾಜಕೀಯಕ್ಕೇ ಸಹಾಯಕವಾಗಿದೆಯೆಂದು ಹೇಳಲಾಗುತ್ತಿದೆ

○

ಪೂಸಾ ಸೀಡರ್

ತಾನಾಗಿ ತಾನೇ ಅನೇಕ ತರಹೆಯ ಬೀಜ ಹಾಕುವಂಥ ಯಂತ್ರ— ಪೂಸಾ ಸೀಡರ್— ಎಂಬುದನ್ನು ಹೊಸ ದೆಹಲಿಯಲ್ಲಿರುವ ಭಾರತೀಯ ಕೃಷಿ ಅನುಸಂಧಾನ ಶಾಲೆಯಲ್ಲಿ ತಯಾರಿಸಿದ್ದಾರೆ.

○

ಡಾ || ಮೋದಿಯವರ ನುಡಿ

ತಿರುಪತಿ— ನನ್ನ ಹುಡುಗ ಹುಡುಗಿಯರು ಮಾನಸಿಕವಾಗಿ, ದೈಹಿಕವಾಗಿ, ಪಾರಮಾರ್ಥಿಕವಾಗಿ ಆರೋಗ್ಯವಂತರಾಗಿರಲು, ಎಲ್ಲಾ ಸ್ಕೂಲು ಕಾಲೇಜುಗಳಲ್ಲೂ ಯೋಗ ಶಿಕ್ಷಣ ಜಾರಿಗೆ ಬರಬೇಕೆಂದು ಡಾ || ಎಂ ಸಿ ಮೋದಿ ಹೇಳಿದರು.

★

ಥೆಮ್ಸ್ ನದಿ

ಲಂಡ್— ಥೆಮ್ಸ್ ನದಿಯು ವಿಂಡ್ಸರ್ ನಲ್ಲಿ ದಡದಿಂದ ದಡಕ್ಕೆ ಹೆಪ್ಪು ಕಟ್ಟಿದೆ.

ಪರುಶರಾಂ ಹಾಲ್

ಸಯ್ಯಾಜಿರಾವ್ ರೋಡ್, ಮೈಸೂರು

ಹೆಬ್ಬಕ್ಕಾಗಿ ತರಹಾವರಿ ಆಕರ್ಷಣೆಬಣ್ಣದ ಸೀರಿಗಳೂ, ಬಟ್ಟೆಗಳೂ ಬಂದಿವೆ.

ನಿಮಗೆ ಬೇಕಾದುವುಗಳನ್ನು ಆರಿಸಿಕೊಳ್ಳಿ.

ಸರಿಯಾದ ಬೆಲೆ.

ಎಸ್ಸೆಸ್ಪಿ ಸಮ್ಮೇಳನ

ಸೋನೇಪುರ— ಎಸ್ಸೆಸ್ಪಿ ವಿಶೇಷ ಸಮ್ಮೇಳನದಲ್ಲಿ ಶನಿವಾರ ಶ್ರೀ ರುದ್ರ ನಾರಾಯಣರನ್ನು ಒಬ್ಬ ನೂಜಿ ಎಸ್ಸೆಸ್ಪಿ ಮಾರ್ಕ್ಸ್ ಯವರ ಮೇಲೆ ಮಾಡದ ಆಪಾದನೆಯು ಸಭೆಯಲ್ಲಿ ಗೊಂದಲ ಉಂಟುಮಾಡಿ ಚಪ್ಪಲಿ ಜೋಡು ಎಸೆತ ನಡೆಯಿತು – ಇಂದಿರಾ ಗಾಂಧಿಯವರ ಸರಕಾರಕ್ಕೆ ಎಸ್ಸೆಸ್ಪಿ ಬೆಂಬಲ ಸಂಬಂಧದಲ್ಲಿ ನಿರಾಧಾರ ಕತೆಗಳನ್ನು ಪ್ರಟಿಸಿವೆಯೆಂದು ಇಂಗ್ಲೀಷು ಮತ್ತು ಹಿಂದಿ ಪತ್ರಿಕೆಗಳನ್ನು ಪಾರ್ಟಿ ಕಾರ್ಯಕರ್ತರು ಸುಟ್ಟುಹಾಕಿದರು.

○

ಭಾರಿ ಮಾನು

ಮಂಗಳೂರು— 17ನರೆ ಅಡಿಯ ಹೆಣ್ಣು ಗರಗಸದ ಮಾನು ಹಿಡಿಯಲ್ಪಟ್ಟಿತು – ತೂಕ 2 ಟ್ಗಳಿವೆ – ಇದನ್ನು ಹರಾಜಿನಲ್ಲಿ ರೂ 277 ಕ್ಕೆ ಮಾರಲಾಯಿತೆಂದು ಗೊತ್ತಾಗಿದೆ.

★

ಕಬ್ಬಿಣದ ಪಾತ್ರೆ

ಖಡಗಪುರ— ದೇಹಕ್ಕೆ ಕಬ್ಬಿಣದ ಅಭಾನ ತಪ್ಪಲು ಕಬ್ಬಿಣ ಪಾತ್ರೆಗಳಲ್ಲಿ ಅಡಿಗೆ ಮಾಡಲು ಪ್ರೊ || ಚಟರ್ಜಿಯವರು ಸೈನ್ಸ್ ಕಾಂಗ್ರೆಸ್‌ನಲ್ಲಿ ತಿಳಿಸಿದರು.

○

ಉಸಿರಾಡುವುದಕ್ಕೂ ಲೈಸೆನ್ಸ್

ಬೆಂಗಳೂರು— ಚೇಂಬರ್ ಆಫ್ ಕಾಮರ್ಸ್ ಭೋಜನಕೂಟದಲ್ಲಿ ಮಾತನಾಡುತ್ತಾ ಡಾ|| ಟಿ ಎ ಎಂ ಪೈರವರು ರಾಜಕೀಯ ಪರಿಸ್ಥಿತಿಯನ್ನು ವಿನೋದವಾಗಿ ವಿವರಿಸುತ್ತಾ ಮೆದಳಿಲ್ಲದವರು ಆಡಳಿತ ನಡೆಸುತ್ತಿರುವರೆಂದೂ, ಉಸಿರಾಡುವುದಕ್ಕೂ ಲೈಸೆನ್ಸು ತೆಗೆದುಕೊಳ್ಳಬೇಕಾದೀತೆಂದೂ ಹೇಳಿದರು.

ಚಂಡೀಘರ ಸಮಸ್ಯೆ

ಚಂಡೀಘರ— ಪ್ರಧಾನಿ ಮತ್ತು ಪಂಜಾಬು ಮತ್ತು ಹರಿಯಾಣಾ ಮುಖ್ಯಮಂತ್ರಿಗಳ ಮಾತುಕತೆ ಉತ್ಕಟ ಪರಿಸ್ಥಿತಿಯಲ್ಲಿರುವಾಗ, ಇಬ್ಬರು ಪಂಜಾಬು ಮಂತ್ರಿಗಳು ರಾಜೀನಾಮೆ ಕೊಟ್ಟಿರುವರು.

★

ಜನತಾ ಪಕ್ಷ

ಬೆಂಗಳೂರು— ಜನತಾ ಪಕ್ಷದಲ್ಲಿ ಒಡಕುಂಟಾಗಿ ಅದು ಹೊಸ ಕಾಂಗ್ರೆಸ್ಸಿನೊಡನೆ ಐಕ್ಯಗೊಂಡಿಲ್ಲವೆಂದೂ, ಪ್ರತ್ಯೇಕ ಉಳಿದಿರುವದೆಂದೂ ಉಪಾಧ್ಯಕ್ಷ ಶ್ರೀ ನಾಗಣ್ಣ ಹೇಳಿರುವರು.

★

ಭಾರತಕ್ಕೆ ನೆದರ್ಲಾಂಡ್ ಸಾಲಾ

ನವದೆಹಲಿ— ಭಾರತವು ತನ್ನ ಅಭಿವೃದ್ಧಿ ಯೋಜನೆಗಳಿಗಾಗಿ ನೆದರ್ಲ್ಯಾಂಡ್ ರೂ 84 ಕೋಟಿ ಸಾಲಾ ಪಡೆಯುವ ಒಪ್ಪಂದಕ್ಕೆ ರುಜುವಾಗಿದೆ.

○

ಭೂಮಾಲೀಕರು

ಬೆಂಗಳೂರು— ಭೂ ಸುಧಾರಣಾ ಶಾಸನ ಜಾರಿಯಿಂದ ಭೂಮಾಲೀಕರಿಗೆ ಆಗಬಹುದಾದ ತೊಂದರೆಗಳಿಂದ ರಕ್ಷಿಸಲು ಭೂಮಾಲೀಕರ ಸಂಘವು ಸರಕಾರದಲ್ಲಿ ವಿನಂತಿಸಿದೆ.

★

ಎಸ್ಸೆಸ್ಪಿ ಪ್ರದರ್ಶನ

ಸೋನಾಪುರ— ಎಸ್ಸೆಸ್ಪಿ ತನ್ನ ಕೇಳಿಕೆಗಳ ಒತ್ತಾಯಕ್ಕಾಗಿ ಡೆಲ್ಲಿಯಲ್ಲಿ ಏಪ್ರಿ 6 ರಂದು ಪ್ರದರ್ಶನ ನಡೆಸಲು ನಿರ್ಧರಿಸಿದೆ

ಹರಯಾಣಾದಲ್ಲಿ ಹರತಾಳಕ್ಕೆ ಕರೆ

ರೋಟಕ್— ಹರಯಾಣಾದಲ್ಲಿ ಎಲ್ಲ ಪಕ್ಷಗಳ ಸಮಿತಿಯು ಚಂಡಿಘರ ಬಗ್ಗೆ ರಾಜ್ಯದ ಹಕ್ಕಿನ ಬೆಂಬಲಕ್ಕಾಗಿ ತಾ|| 16 ರಂದು ರಾಜ್ಯಾದ್ಯಂತ ಹರತಾಳಕ್ಕೆ ಕರೆ ಕೊಟ್ಟಿದೆ.

★

180 ವರ್ಷದ ಮನುಷ್ಯ

ಈಶಾನ್ಯ ಇರಾನಿನ ಸಬ್ಜವಾರ್ ಹತ್ತಿರ ಮಣಿದಾರ್ ಗ್ರಾಮದಲ್ಲಿ ವಿಶ್ವದ ಅತಿ ಹೆಚ್ಚು ವಯಸ್ಸಿನ, 180 ವರ್ಷದ ಮಹಮದ್ ಅಯೂಬ್ ಎಂಬಾತ ಇರುವುದಾಗಿ ವರದಿಯಾಗಿದೆ.

★

ಗಾಂಧಿ ತತ್ವ

ಬೊಂಬಾಯಿ— ಭಾರತದಿಂದ ಬೌದ್ಧ ತತ್ವವು ಹೊರಟುಹೋದಂತೆ ಗಾಂಧೀತತ್ವವೂ ಹೋಗುತ್ತದೆ ಎಂದು ಖಾನ್ ಅಬ್ದುಲ್ ಗಫಾರ್ ಖಾನ್ ರು ಹೇಳಿದರು – ಸ್ವಾತಂತ್ರ್ಯಕ್ಕೆ, ಬಡವರ ಅಭ್ಯುದಯಕ್ಕೆ, ಐಕ್ಯತೆಗೆ ಹೋರಾಡಿದ ಮಹಾತ್ಮಾ ಗಾಂಧಿಯವರು ತೋರಿಸಿದ ಮಾರ್ಗವನ್ನು ಭಾರತೀಯರು ನುರೆತಿರುವರೆಂದು ಹೇಳಿದರು.

●

ಗಾಂಧೀಜೀ ಆದರ್ಶ ಅನುಸರಿಸಿ

ಮೈಸೂರು— 23 ನೇ ನುಹಾತ್ಮಾ ಗಾಂಧಿ ಸ್ಮಾರಕ ಶಾಂತಿ ಸಮಾರಂಭವನ್ನು ಉದ್ಘಾಟಿಸುತ್ತಾ ಗೌರ್ನರ್ ಶ್ರೀ ಧರ್ಮವೀರರವರು ಗಾಂಧೀಜಿಯವರ ಆದರ್ಶ ಅನುಸರಿಸಲು ಕರೆಯಿತ್ತರು – ನಾವು ಶುದ್ಧವಾಗಿದ್ದು, ಉದಾತ್ತವಾಗಿದ್ದರೆ, ಶಾಂತಿಯು ನಮ್ಮಲ್ಲಿಗೆ ಬರುವುದೆಂದೂ, ಒಳಗಿನ ಶುಚಿತ್ವ ಅವಶ್ಯಕವೆಂದೂ ಹೇಳಿದರು.

"Bank Road Bahusar – A Fair Price Shop in Actual Practice"

ಶ್ರೀ ರಾಮಚಂದ್ರ ಸ್ವಾಮಿಯಲ್ಲಿ ನಾಯಿಯ ಮನವಿ

ಇದೊಂದು ರಾಮಾಯಣದಲ್ಲಿನ ಕಥೆ. ರಾಜ ಶ್ರೀ ರಾಮಚಂದ್ರ ದರ್ಬಾರು ನಡೆಸುತ್ತಿದ್ದ. ಎಲ್ಲರ ದೂರು ವೃತ್ತಿತರ ವಿಷಯಗಳ ಕಡೆ ಗಮನ ಕೊಡುತ್ತಿದ್ದನು. ಒಂದು ದಿನ ಹೀಗೆ ನೆರೆದಿರಿಸಿದ ನಂತರ ಏಳಲಿದ್ದನು. ಆಗ, ಮತ್ಯಾರೂ ದೂರು ಕೊಡುವವರಿಲ್ಲವೇ ನೋಡು ಎಂದು ಲಕ್ಷ್ಮಣನಿಗೆ ತಿಳಿಸಿದನು. ಲಕ್ಷ್ಮಣನು ಅತ್ತ ಇತ್ತ ನೋಡಿ, ಯಾರೂ ಇಲ್ಲವೆಂದು ಹೇಳಿದನು. ಲಕ್ಷ್ಮಣ ದಯವಿಟ್ಟು ಹೊರಗೆ ನೋಡು, ಯಾರಾದರೂ ಇರಬಹುದು ಎಂದು ಪುನಃ ಶ್ರೀ ರಾಮನು ಹೇಳಿದನು. ಲಕ್ಷ್ಮಣನು ಹೊರಗೆ ಬಂದು ನೋಡಲು, ಒಂದು ವ್ಯಸನಾಕ್ರಾಂತ ನಾಯಿಯು ನೋಡಿದ್ದನ್ನು ಕಂಡು, ಆ ವಿಷಯವನ್ನು ಶ್ರೀ ರಾಮನಿಗೆ ತಿಳಿಸಿದಾಗ, ನಾಯಿಯನ್ನು ಕರೆತರುವಂತೆ ಅವನು ಹೇಳಿದನು.

ನಾಯಿಯನ್ನು ಒಳಗೆ ಕರತರಲಾಯಿತು. ಶ್ರೀ ರಾಮನನ್ನು ಕುರಿತು, ನಿನಗೇನು ವ್ಯಸನ ಎಂದು ಕೇಳಿದನು. ನಾಯಿಯು ಉತ್ತರಿಸಿತು– ' ನಾನು ರಸ್ತೆಯಲ್ಲಿ ಮಲಗಿದ್ದೆ, ದೃಷ್ಟವಾಗಿರಲಿಲ್ಲಿ ; ಆಗ ಈ ದರ್ಬಾರ್‌ನಿಂದ ಬಂದ ಒಬ್ಬ ಬ್ರಾಹ್ಮಣನು ನಾನು ರಸ್ತೆಯಲ್ಲಿ ಮಲಗಿದ್ದದು ಅವನಿಗೆ ಹೋಗಲು ಅಡ್ಡಿಯಾಯಿತೆಂದು ನನ್ನನ್ನು ಹೊಡೆದನು ; ನಾನು ಅಡ್ಡಿ ಮಾಡಲಿಲ್ಲ, ಎಂದು ಹೇಳಿತು.

ಶ್ರೀ ರಾಮಚಂದ್ರನು ಬ್ರಾಹ್ಮಣನನ್ನು ಕರೆಸಿ, ಯಾಕೆ ಇದನ್ನು ಹೊಡೆದ ಎಂದು ಕೇಳಿದನು.

ನಾನು ಒಹಳ ಆತುರದಲ್ಲಿದ್ದೆ, ನಾಯಿ ರಸ್ತೆಯಿಂದ ಏಳಲಿಲ್ಲ, ಅದಕ್ಕಾಗಿ ಹೊಡೆದೆ, ಎಂದು ಬ್ರಾಹ್ಮಣನು ಹೇಳಿದನು

ಶ್ರೀ ರಾಮನು ನಾಯಿಯ ಕಡೆ ತಿರುಗಿ, ' ಬ್ರಾಹ್ಮಣ ತನ್ನ ಅಪರಾಧ ಒಪ್ಪಿಕೊಂಡಿದ್ದಾನೆ ; ಇವನಿಗೆ ಏನು ಶಿಕ್ಷೆ ಕೊಡಬೇಕೆಂದು ನಿನ್ನ ಇಚ್ಛೆ ' ಎಂದು ಕೇಳಿದನು.

ಗೋರಕ್ಷಣೆಗೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್, ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

SHAKTI

SUDHA

A Superb Tonic

ದೇಶದ ಹಿತಕಾಗಿ

ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ ಅಮೋಘ 2ನೇ ವಾರ

ಶಿನ ಅಮೋಘ ಸ್ವಾರಂಭ

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆಪೂಜೆ

ನಟವರ್ಗ– ಕಲ್ಪನ, ಅಶ್ವಥ್, ಬಾಲಕೃಷ್ಣ, ಪಂಡರಿಬಾಯಿ

ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್

[ದಿನ 3 ಪ್ರದರ್ಶನಗಳು]

ಅಪೆರಾ— ಅನೋಘ 3ನೇ ವಾಗ

.... ಅತ್ಯಮೋಘ ಹಿಂದಿ ಚಿತ್ರ ....

ನನ್ನ ಘರಿಷ್ಟ

ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 6